# ಬಿಟ್‌ಚಾಟ್; ಬೇಕಿಲ್ಲ ಇಂಟರ್‌ನೆಟ್

**ಎಕ್ಸ್‌ನಿಂದ (ಟ್ವಿಟರ್) ಹೊರಗುಳಿದ ಬಳಿಕ ಬ್ಲೂಸ್ಕೈ ಮೂಲಕ ಸದ್ದು ಮಾಡಿದ್ದ ಟ್ವಿಟರ್ ಸಂಸ್ಥಾಪಕ ಜಾಕ್ ಡೋರ್ಸಿ, ಈಗ ಹೊಸ ಆ್ಯಪ್‌ನೊಂದಿಗೆ ಮತ್ತೆ ಮುನ್ನೆಲೆಗೆ ಬಂದಿದ್ದಾರೆ.**

**■ ಶಶಿಕುಮಾರ್ ಸಿ.**

ಒಂದು ಕಾಲದಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಸಂಚಲನ ಮೂಡಿಸಿದ್ದ ಟ್ವಿಟರ್‌ನ ಸಹ ಸಂಸ್ಥಾಪಕ ಜಾಕ್ ಡೋರ್ಸಿ, ಕೆಲವೊಂದು ಅನಿವಾರ್ಯ ಕಾರಣಗಳಿಂದ ಆ್ಯಪ್‌ನಿಂದ ಹೊರಗುಳಿಯಬೇಕಾಯಿತು. ಆದಾಗ್ಯೂ ಸಾಮಾಜಿಕ ಜಾಲತಾಣಗಳೊಂದಿಗಿನ ನಂಟನ್ನು ಬಿಡಿಸಿಕೊಳ್ಳಲೊಪ್ಪದ ಜಾಕ್, ಬ್ಲೂಸ್ಕೈ ಎಂಬ ಸೋಷಿಯಲ್ ಮೀಡಿಯಾ ಆ್ಯಪ್‌ನೊಂದಿಗೆ ಮತ್ತೆ ಬಂದರಾದರೂ ಅದು ನಿರೀಕ್ಷಿತ ಮಟ್ಟದಲ್ಲಿ ಯಶಸ್ಸನ್ನು ಗಳಿಸಲಿಲ್ಲ.

ಈಗ ಮತ್ತೊಂದು ಪ್ರಯೋಗದ ಮೂಲಕ ಅಗ್ನಿಪರೀಕ್ಷೆಗೆ ಇಳಿದಿರುವ ಅವರು, ಇಂಟರ್‌ನೆಟ್ ಇಲ್ಲದೆಯೇ ಸಂದೇಶಗಳನ್ನು ರವಾನಿಸುವಂತಹ 'ಬಿಟ್‌ಚಾಟ್' ಎಂಬ ಆ್ಯಪ್‌ನೊಂದಿಗೆ ಸಾಮಾಜಿಕ ಜಾಲತಾಣಗಳೆಂಬ ರಂಗಸ್ಥಳವನ್ನು ಮತ್ತೆ ಪ್ರವೇಶಿಸಲು ಸಜ್ಜಾಗುತ್ತಿದ್ದಾರೆ.

ಬಿಟ್‌ಚಾಟ್ ಈ ಕ್ಷಣಕ್ಕೆ ಜಾಕ್ ಡೋರ್ಸಿಯ ಕನಸಿನ ಕೂಸು. ಟ್ವಿಟರ್‌ನಂತಹ ಯಶಸ್ಸನ್ನು ಮರಳಿ ಗಳಿಸಲೇಬೇಕೆಂಬ ಹಟಕ್ಕೆ ಬಿದ್ದಿರುವ ಅವರು ಬ್ಲೂಸ್ಕೈ ಆ್ಯಪ್‌ನ ನಂತರ ಈ ಇಂಟರ್‌ನೆಟ್ ಹಾಗೂ ವೈಫೈ ಇಲ್ಲದೆಯೂ ಕಾರ್ಯನಿರ್ವಹಿಸುವ ಬಿಟ್‌ಚಾಟ್ ಆ್ಯಪ್‌ಗೆ ಕೈಹಾಕಿದ್ದು, ಇದರ ಪ್ರಾಯೋಗಿಕ ಪರೀಕ್ಷೆಯು ಈಗಾಗಲೇ ನಡೆಯುತ್ತಿದೆ. ಅದು ಐಒಎಸ್ ಸಾಧನಗಳಲ್ಲಿ ಮಾತ್ರ.

ಸಾಮಾನ್ಯವಾಗಿ ಯಾವುದೇ ಮೆಸೇಜಿಂಗ್ ಆ್ಯಪ್ ಮತ್ತು ಸೋಷಿಯಲ್ ಮೀಡಿಯಾ ಆ್ಯಪ್‌ಗಳು ಕಾರ್ಯನಿರ್ವಹಿಸಬೇಕಾದರೆ ನೆಟ್‌ವರ್ಕ್, ಇಂಟರ್‌ನೆಟ್ ಅಥವಾ ವೈಫೈ ಅತ್ಯಗತ್ಯ. ಆದರೆ ಜಾಕ್‌ನ ಈ ಆ್ಯಪ್‌ಗೆ ಇದ್ಯಾವುದರ ಅಗತ್ಯವಿಲ್ಲ ಎನ್ನುವುದೇ ವಿಶೇಷ. ಇದು ಸಂದೇಶಗಳನ್ನು ಎಂಡ್‌–ಟು–ಎಂಡ್ ಎನ್‌ಕ್ರಿಪ್ಷನ್ ಬಳಸಿ ಹತ್ತಿರದ ಸಾಧನಗಳಿಗೆ ಕಳುಹಿಸುತ್ತದೆ. ಜಾಕ್‌ನ ಈ ಹೊಸ ಕಲ್ಪನೆಯು ಟೆಕ್ ಜಗತ್ತಿನ ಗಮನಸೆಳೆಯುತ್ತಿದೆ.

ಪೀರ್–ಟು–ಪೀರ್ ಮೆಸೇಜಿಂಗ್ ಆ್ಯಪ್ ಆಗಿರುವ ಬಿಟ್‌ಚಾಟ್, ಬ್ಲೂಟೂತ್ ಮೂಲಕ ಆಫ್‌ಲೈನ್ ಸಂದೇಶಗಳನ್ನು ಕಳುಹಿಸಲು ನೆರವಾಗುವುದು ಇದರ ವಿಶೇಷ. ಇಂಟರ್‌ನೆಟ್ ಅಥವಾ ವೈಫೈನೊಂದಿಗೆಯೂ ಇದು ಕಾರ್ಯನಿರ್ವಹಿಸಲಿದ್ದು, ಸರಿಯಾಗಿ ನೆಟ್‌ವರ್ಕ್ ಸಿಗದ ಮತ್ತು ಇಂಟರ್‌ನೆಟ್ ಸಿಗದ ದುರ್ಗಮ ಪ್ರದೇಶಗಳಲ್ಲಿ ಸಂವಹನ ನಡೆಸಲು ಸಹಾಯಕ್ಕೆ ಬರಲಿದೆ.

### ಹೇಗೆ ಕೆಲಸ ಮಾಡುತ್ತದೆ?

ಬಿಟ್‌ಚಾಟ್ ಸೀಮಿತ ಪ್ರದೇಶ ಅಥವಾ ದೂರದ ವರೆಗೆ ಸಂವಹನ ನಡೆಸಲು ಸೇತುವೆಯಾಗುತ್ತದೆ. ಇದಕ್ಕಾಗಿ ಸೆಂಟ್ರಲ್ ಸರ್ವರ್‌ಗಳು, ಫೋನ್ ನಂಬರ್‌ಗಳು, ಇಂಟರ್‌ನೆಟ್ ಅಥವಾ ಇಮೇಲ್ ವಿಳಾಸಗಳು ಬೇಕಾಗಿಲ್ಲ. ಬಳಕೆದಾರರು ತಮ್ಮ ಫೋನ್‌ಗಳೊಂದಿಗೆ ನಡೆದಾಡುವಾಗ, ಬ್ಲೂಟೂತ್ ಬಳಸಿ ಹತ್ತಿರದ ಸಾಧನಗಳನ್ನು ಸಂಪರ್ಕಿಸಿ ಗುಂಪನ್ನು ರಚಿಸುತ್ತದೆ. ಈ ಮೂಲಕ ಸಂವಹನ ಏರ್ಪಡಿಸುತ್ತದೆ.

ಸಂದೇಶ ತಲುಪಬೇಕಾದ ವ್ಯಕ್ತಿ ತುಂಬಾ ದೂರದಲ್ಲಿದ್ದರೆ, ಸಂದೇಶವು ಒಂದು ಫೋನ್‌ನಿಂದ ಇನ್ನೊಂದು ಹತ್ತಿರದ ಫೋನ್‌ಗೆ ತಲುಪುತ್ತದೆ. ಅಂತಿಮವಾಗಿ ಸಂದೇಶ ತಲುಪಬೇಕಾದ ವ್ಯಕ್ತಿಗೆ ಸಂದೇಶ ತಲುಪುವವರೆಗೆ ಈ ಪ್ರಕ್ರಿಯೆ ಮುಂದುವರೆಯುತ್ತದೆ. ಇದನ್ನು ಮೆಷ್ ನೆಟ್‌ವರ್ಕಿಂಗ್ ಎಂದು ಕರೆಯಲಾಗುತ್ತದೆ. ಬಿಟ್‌ಚಾಟ್ ಈ ನೆಟ್‌ವರ್ಕಿಂಗ್ ಬಳಸಿ ಕಾರ್ಯನಿರ್ವಹಿಸಲಿದೆ. ಇಷ್ಟೆಲ್ಲದರ ನಡುವೆ ಎಂಡ್–ಟು–ಎಂಡ್ ಎನ್‌ಕ್ರಿಪ್ಷನ್ ಬಳಸಿ ಸಂದೇಶಗಳನ್ನು ಕಳುಹಿಸುವುದರಿಂದ ಸಂದೇಶ ತಲುಪಿಸುವವರು ಹಾಗೂ ಅಂತಿಮವಾಗಿ ಸಂದೇಶ ಯಾರಿಗೆ ತಲುಪಬೇಕಾಗಿದೆಯೋ ಅವರನ್ನು ಹೊರತುಪಡಿಸಿ ಬೇರೆ ಯಾರೂ ಸಂದೇಶವನ್ನು ಓದಲು ಸಾಧ್ಯವಾಗುವುದಿಲ್ಲ.

### ಡೌನ್‌ಲೋಡ್ ಹೇಗೆ?

ಬಿಟ್‌ಚಾಟ್ ಪ್ರಸ್ತುತ ಬೀಟಾ ಟೆಸ್ಟಿಂಗ್ ಹಂತದಲ್ಲಿದೆ. ಆ್ಯಪಲ್‌ನ ಟೆಸ್ಟ್‌ಫ್ಲೈಟ್ ಪ್ಲಾಟ್‌ಫಾರ್ಮ್ ಮೂಲಕ ಸೀಮಿತ ಸಂಖ್ಯೆಯ ಐಒಎಸ್ ಬಳಕೆದಾರರಿಗೆ ಮಾತ್ರ ಪ್ರಾಯೋಗಿಕ ಪರೀಕ್ಷೆಗೆ ಅವಕಾಶ ಕಲ್ಪಿಸಲಾಗಿದೆ. ಇದು ಈಗಾಗಲೇ 10,000 ಬಳಕೆದಾರರ ಮಿತಿಯನ್ನು ತಲುಪಿದೆ. ಆ್ಯಪ್‌ನ ಅಧಿಕೃತ ಬಿಡುಗಡೆ ದಿನಾಂಕವನ್ನು ಇನ್ನೂ ಜಾಕ್ ಘೋಷಿಸಿಲ್ಲ. ಐಒಎಸ್ ಜೊತೆ ಜೊತೆಗೆ ಆ್ಯಂಡ್ರಾಯ್ಡ್ ಆವೃತ್ತಿಯನ್ನೂ ಅಭಿವೃದ್ಧಿಪಡಿಸಲಾಗುತ್ತಿದೆ.

### ಆ್ಯಪ್‌ನ ವಿಶೇಷ

- ಆಫ್‌ಲೈನ್ ಸಂವಹನಕ್ಕೆ ಹೆಚ್ಚಿನ ಆದ್ಯತೆ. ಬ್ಲೂಟೂತ್ ಮೆಷ್ ನೆಟ್ವರ್ಕಿಂಗ್ ಬಳಸಿ ಇಂಟರ್ನೆಟ್ ಇಲ್ಲದೆ ಕಾರ್ಯನಿರ್ವಹಿಸುವ ಈ ಆ್ಯಪ್ ಕುಗ್ರಾಮಗಳ ಜನರಿಗೆ ಅನುಕೂಲ ಮಾಡಿಕೊಡಲಿದೆ.
- ಎಂಡ್–ಟು–ಎಂಡ್ ಎನ್‌ಕ್ರಿಪ್ಷನ್ ಆಯ್ಕೆಯನ್ನು ಹೊಂದಿರುವುದರಿಂದ ಬಿಟ್‌ಚಾಟ್‌ನ ಮೂಲಕ ಕಳುಹಿಸುವ ಎಲ್ಲ ಸಂದೇಶಗಳು ಎನ್‌ಕ್ರಿಪ್ಟ್ ಆಗಿರುತ್ತವೆ. ಬಳಕೆದಾರರ ಖಾಸಗೀತನಕ್ಕೆ ಆದ್ಯತೆಯನ್ನು ನೀಡುತ್ತದೆ.
- ವಿಸ್ತೃತ ವ್ಯಾಪ್ತಿಯನ್ನು ಹೊಂದಿರುವ ಈ ಆ್ಯಪ್‌ನ ಮೂಲಕ ಸಾಗುವ ಸಂದೇಶಗಳು ಸಹವರ್ತಿಗಳ ಮೂಲಕ ರಿಲೇ ಆಗಿ 300 ಮೀಟರ್ (984 ಅಡಿ) ವರೆಗೆ ತಲುಪುತ್ತವೆ.
- ನಿರ್ದಿಷ್ಟ ವ್ಯಕ್ತಿಗೆ ಸಂದೇಶವನ್ನು ರವಾನಿಸಬೇಕಾದಲ್ಲಿ @ ಚಿಹ್ನೆಯೊಂದಿಗೆ ಬಳಕೆದಾರರ ಐಡಿಯನ್ನು ನಮೂದಿಸುವ ಮೂಲಕ ರವಾನಿಸಬಹುದು.
- ವಿಷಯ ಆಧರಿತ ಸಂಭಾಷಣೆಗಳನ್ನು ನಡೆಸಲು ಆ್ಯಪ್‌ನಲ್ಲಿ ಪ್ರತ್ಯೇಕವಾಗಿ ರೂಮ್‌ಗಳನ್ನು (ತಂಡಗಳನ್ನು) ರಚಿಸಬಹುದು. ಆ ಮೂಲಕ ಗುಂಪು ಗುಂಪಾಗಿ ಸಂವಹನ ನಡೆಸಬಹುದು.
- ಗುಂಪು ಗುಂಪಾಗಿ ಸಂವಹನ ನಡೆಸಲು ರಚಿಸಿದ ರೂಮ್‌ಗಳಿಗೆ ಪಾಸ್‌ವರ್ಡ್ ಸೆಟ್ ಮಾಡಬಹುದು. ಹಾಗೆಯೇ ಎಇಎಸ್ ಎನ್‌ಕ್ರಿಪ್ಷನ್ ಬಳಸಿ ರೂಮ್‌ಗಳನ್ನು ಇನ್ನಷ್ಟು ಸುರಕ್ಷಿತಗೊಳಿಸಬಹುದು.
- ಯಾವುದೇ ಟ್ರ್ಯಾಕಿಂಗ್, ಸರ್ವರ್‌ಗಳು, ಖಾತೆಗಳು ಅಥವಾ ಡೇಟಾ ಸಂಗ್ರಹಣೆಯನ್ನು ಆ್ಯಪ್ ಮಾಡುವುದಿಲ್ಲ. ಇದು ಬಳಕೆದಾರರ ಗೌಪ್ಯತೆಗೆ ಹೆಚ್ಚಿನ ಆದ್ಯತೆ ನೀಡಿರುವುದರ ಸಂಕೇತವಾಗಿದೆ. ■